## ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1983 (2230) |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಎನ್. ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 26.03.2026 |
| ಉತ್ತರಿಸುವವರು | : | ಮಾನ್ಯ ಮುಖ್ಯಮಂತ್ರಿಗಳು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಇತ್ತೀಚೆಗೆ ವಿಧಾನಸೌಧದ ಆವರಣದಲ್ಲಿ ಮಾಧ್ಯಮ ಪ್ರತಿನಿಧಿಗಳ ಮುಕ್ತ ಸಂಚಾರಕ್ಕೆ ನಿರ್ಬಂಧ ಹೇರಿ ಸರ್ಕಾರದಿಂದ ಆದೇಶ ಹೊರಡಿಸಲಾಗಿದೆಯೇ; | ಹೊರಡಿಸಿರುವುದಿಲ್ಲ. |
| ಆ) | ಮಾಧ್ಯಮಗಳಿಗೆ ಪ್ರತ್ಯೇಕ ಸ್ಥಳ ನಿಗದಿಪಡಿಸುವ ನೆಪದಲ್ಲಿ ಪತ್ರಿಕಾ ಸ್ವಾತಂತ್ರ್ಯವನ್ನು ಹತ್ತಿಕ್ಕುವ ಮತ್ತು ಸರ್ಕಾರದ ವೈಫಲ್ಯಗಳನ್ನು ಮುಚ್ಚಿಡುವ ಪ್ರಯತ್ನ ಮಾಡಲಾಗುತ್ತಿದೆಯೆಂದು ಸಾರ್ವಜನಿಕ ಅಭಿಪ್ರಾಯಪಡುತ್ತಿದ್ದು, ಈ ಕುರಿತು ಸರ್ಕಾರದ ಉತ್ತರವೇನು; ಸದರಿ ಆದೇಶವನ್ನು ಹೊರಡಿಸುವ ಪ್ರೇರಪಿಸಿದ ಪ್ರಬಲ ಭದ್ರತಾ ಕಾರಣಗಳೇನಾದರೂ ಇವೆಯೇ; (ವಿವರ ನೀಡುವುದು) | ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಿಂದ ವಿತರಿಸಲಾಗಿರುವ ಮಾಧ್ಯಮ ಮಾನ್ಯತಾ ಕಾರ್ಡ್ ಹೊಂದಿರುವ ವಿದ್ಯುನ್ಮಾನ ಮತ್ತು ಮತ್ತು ಮುದ್ರಣ ಮಾಧ್ಯಮದವರಿಗೆ ವಿಧಾನಸೌಧದಲ್ಲಿ ನಡೆಯುವ ಯಾವುದೇ ಕಾರ್ಯಕ್ರಮ/ಕಾರ್ಯಾಗಾರಗಳು/ಪತ್ರಿಕಾ ಗೋಷ್ಠಿಗಳು/ಸಭೆಗಳಲ್ಲಿ ಭಾಗವಹಿಸದಂತೆ ಸರ್ಕಾರದಿಂದ ಯಾವುದೇ ರೀತಿಯ ನಿರ್ಬಂಧ ವಿಧಿಸಿರುವುದಿಲ್ಲ. ಮಾಧ್ಯಮದವರು ಈ ಹಿಂದಿನಂತೆ ವಿಧಾನಸೌಧದಲ್ಲಿ ನಡೆಯುವ ಕಾರ್ಯಕ್ರಮಗಳು/ಪತ್ರಿಕಾ ಗೋಷ್ಠಿಗಳಲ್ಲಿ ಭಾಗವಹಿಸುತ್ತಿದ್ದಾರೆ. ಭದ್ರತಾ ದೃಷ್ಟಿಯಿಂದ ವಿಧಾನಸೌಧದ ಪಶ್ಚಿಮ ದ್ವಾರದ ಪೋರ್ಟಿಕೋ ಬಳಿ ನಿಗದಿಪಡಿಸಲಾಗಿರುವ ಸ್ಥಳದಲ್ಲಿ ಮಾತ್ರ ಸುವ್ಯವಸ್ಥಿತವಾಗಿ ಎಲೆಕ್ಟ್ರಾನಿಕ್ ಮಾಧ್ಯಮದವರು ಸಂಬಂಧಪಟ್ಟವರಿಂದ ಬೈಟ್ ಹೇಳಿಕೆಗಳನ್ನು ಪಡೆದುಕೊಳ್ಳುವಂತೆ ಸರ್ಕಾರದ ಪತ್ರ ಸಂಖ್ಯೆ: ಸಿಆಸುಇ 11 ಡಿಇವಿ 2026, ದಿನಾಂಕ:09.02.2026ರಲ್ಲಿ ತಿಳಿಸಲಾಗಿದೆ. |
| ಇ) | ನಗರಾಭಿವೃದ್ಧಿ ಸಚಿವರ ವಿಧಾನಸೌಧ ಕಛೇರಿಯಲ್ಲಿ ಇತ್ತೀಚೆಗೆ ನಗದು ಹಣ ಮತ್ತು ಚಿನ್ನಾಭರಣ ಕಳ್ಳತನವಾಗಿರುವ ಬಗ್ಗೆ ಮಾಧ್ಯಮಗಳಲ್ಲಿ ವರದಿಯಾಗಿದ್ದು, ಘಟನೆಯ ಕುರಿತು ಸರ್ಕಾರದ ಉತ್ತರವೇನು; ಸರ್ಕಾರದ ಉನ್ನತ ಭದ್ರತಾ ವಲಯದಲ್ಲಿರುವ ಭದ್ರತಾ ಲೋಪವನ್ನು ಎತ್ತಿ ತೋರಿಸುವುದಿಲ್ಲವೇ; (ವಿವರ ನೀಡುವುದು) | ಶ್ರೀ ಆರ್. ನವೀನ್‌ಕುಮಾರ್ ಎಂಬುವವರು ದಿನಾಂಕ:04.02.2026 ರಂದು ವಿಧಾನಸೌಧ ಕೊಠಡಿ ನಂ.316Aಗೆ ಭೇಟಿ ನೀಡಿದ ನಂತರ ಅವರ ಬಳಿಯಿದ್ದ Akamai ಲ್ಯಾಪ್‌ಟ್ಯಾಪ್ ಬ್ಯಾಗ್ ಅನ್ನು ಬಿಟ್ಟು ಹೋಗಿರುತ್ತಾರೆ. ದಿನಾಂಕ:05.02.2026ರಂದು ಸಂಜೆ ಸುಮಾರು 4:40 ಗಂಟೆಯಲ್ಲಿ ತನ್ನ ಬ್ಯಾಗ್ ದೊರೆತಾಗ ಅದರಲ್ಲಿ ದಾಖಲಾತಿಗಳು ಮಾತ್ರ ಇರುತ್ತದೆ. ತಾನು ಬ್ಯಾಗ್‌ನಲ್ಲಿ ಸುಮಾರು 200 ಗ್ರಾಂ ಚಿನ್ನದ ಆಭರಣಗಳು, 90,000/- ರೂ. ಬೆಲೆಬಾಳುವ ಗೋಲ್ಡ್ ಪ್ಲೇಟೆಡ್ ಬೆಳ್ಳಿಯ ಒಡವೆಗಳು ಹಾಗೂ ರೂ. 1,00,000/-ನಗದು ಹಣ ಕಳುವಾಗಿರುವ ಬಗ್ಗೆ ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ನೀಡಿದ ದೂರಿನ ಮೇರೆಗೆ ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ಮೊಕದ್ದಮೆ ಸಂ. 17/2026 ಕಲಂ:305 ಭಾರತೀಯ ನ್ಯಾಯ ಸಂಹಿತೆ ರೀತ್ಯಾ ಪ್ರಕರಣ ದಾಖಲಾಗಿರುತ್ತದೆ.<br><br>ದಿನಾಂಕ:07.02.2026 ರಂದು ಆರೋಪಿಯನ್ನು ಪತ್ತೆಹಚ್ಚಿ ಕಳುವಾದ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿದ್ದು, ನ್ಯಾಯಾಲಯದ ಆದೇಶದಂತೆ ಕಳುವಾಗಿದ್ದ ವಸ್ತುಗಳನ್ನು ಫಿರ್ಯಾದುದಾರಿಗೆ ಹಿಂದಿರುಗಿಸಿದ್ದು, ಪ್ರಕರಣವು ಪ್ರಸ್ತುತ ತನಿಖಾ ಹಂತದಲ್ಲಿರುತ್ತದೆ. |

| | | |
|---|---|---|
| (ಈ) | ರಾಜ್ಯದ ಶಕ್ತಿ ಕೇಂದ್ರವಾದ ವಿಧಾನಸೌಧ ಸಚಿವರ ಕಛೇರಿಯಲ್ಲಿಯೇ ಇಂತಹ ಕಳ್ಳತನ ನಡೆಯುತ್ತಿರುವುದು ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣ ಕುಸಿದಿರುವುದಕ್ಕೆ ಸಾಕ್ಷಿಯಲ್ಲವೇ; ಸದರಿ ಪ್ರಕರಣದಲ್ಲಿ ಭಾಗಿಯಾದವರ ವಿರುದ್ಧ ಮತ್ತು ಭದ್ರತಾ ವೈಫಲ್ಯಕ್ಕೆ ಕಾರಣರಾದ ಅಧಿಕಾರಿಗಳ ಮೇಲೆ ಸರ್ಕಾರ ಕೈಗೊಂಡಿರುವ ಶಿಸ್ತು ಕ್ರಮ ಏನು? (ವಿವರ ನೀಡುವುದು) | ಪ್ರಕರಣದಲ್ಲಿ ಭಾಗಿಯಾಗಿದ್ದ ಆರೋಪಿಯನ್ನು ಪತ್ತೆಹಚ್ಚಿ, ಅವರನ್ನು ಕ್ರಿಮಿನಲ್/ಇಲಾಖಾ ವಿಚಾರಣೆಯನ್ನು ಬಾಕಿ ಇರಿಸಿ, ದಿನಾಂಕ:07.02.2026ರಿಂದ ಜಾರಿಗೆ ಬರುವಂತೆ ಸೇವೆಯಿಂದ ಅಮಾನತ್ತಿನಲ್ಲಿಡಲಾಗಿದೆ. ಪ್ರಕರಣವು ಪ್ರಸ್ತುತ ತನಿಖಾ ಹಂತದಲ್ಲಿರುತ್ತದೆ. |

(ಸಿದ್ದರಾಮಯ್ಯ)
ಮುಖ್ಯಮಂತ್ರಿ

ಕಡತ ಸಂಖ್ಯೆ: ಸಿಆಸುಇ 38 ಡಿಇಎ 2026